ಸಂಪಾದಕೀಯ

# ಶ್ರೀಮಾತೆಯವರು ಮತ್ತು ಪೂಜೆಯ ಆದರ್ಶ

ಹಿಂದೂ ಧರ್ಮ ಹಾಗೂ ಅದರಿಂದ ಕವಲೊಡೆದ ಬೌದ್ಧ ಧರ್ಮ, ಜೈನ ಧರ್ಮಗಳಲ್ಲಿ ಪೂಜೆಯು ಧರ್ಮದ ಒಂದು ಪ್ರಮುಖ ಹಾಗೂ ಅವಿಭಾಜ್ಯ ಅಂಗ. ಕ್ರೈಸ್ತ ಧರ್ಮ, ಇಸ್ಲಾಂ ಧರ್ಮ ಹಾಗೂ ಯಹೂದಿ ಧರ್ಮಗಳಲ್ಲಿ ವಿಧ್ಯುಕ್ತ ಪೂಜೆಯ ಪದ್ಧತಿ ಇಲ್ಲವೆಂದೇ ಹೇಳಬಹುದು. ಹಿಂದೂಧರ್ಮದ ಆಚರಣೆಗಳನ್ನು, ಆರಾಧನೆಯ ಪ್ರಕಾರವನ್ನು ಒಪ್ಪದವರೂ ತಮ್ಮ ಧರ್ಮಗಳಲ್ಲಿ ವಿವಿಧ ಬಣ್ಣಗಳ ವಸ್ತ್ರಗಳನ್ನು ಬಳಸಿ ಅಲಂಕರಿಸುವುದು; ಮೇಣದ ಬತ್ತಿಯನ್ನು ಉರಿಸುವುದು; ಹಾರಗಳಿಂದ, ಸುಗಂಧ ದ್ರವ್ಯಗಳಿಂದ ಸಿಂಗರಿಸುವುದು ಇವೆಲ್ಲವನ್ನೂ ಮಾಡುವುದುಂಟು. ಅವರಲ್ಲಿಯೂ ಪೂಜೆ ಇದ್ದೇ ಇದೆ. ಪೂಜೆ ಅಥವಾ ಆರಾಧನೆ ಮೂಲತಃ ಗೌರವ, ಶ್ರದ್ಧೆಗಳನ್ನು ಸೂಚಿಸುವ ಮಾನವನ ಆಂತರಿಕ ಹಂಬಲ ಎಂದು ಇದರಿಂದ ತಿಳಿಯಬಹುದು. ಶ್ರದ್ಧೆಯು ಬಾಹ್ಯ ಕ್ರಿಯೆಗಳ ಮೂಲಕ ವ್ಯಕ್ತವಾದಾಗ ಪೂಜೆಯ ಆಕಾರವನ್ನು ಪಡೆಯುತ್ತದೆ.

ಎಲ್ಲ ಕ್ರಿಯೆಗಳೂ ಭಾವನೆಗಳಿಂದ ಪ್ರಚೋದಿತವಾದುವೇ. ಆದ್ದರಿಂದ ಪೂಜಾಕ್ರಿಯೆಯಲ್ಲೂ ಭಾವನೆಗೆ ಪ್ರಾಧಾನ್ಯ ಇರಬೇಕು ಎಂಬುದನ್ನು ಶ್ರೀರಾಮಕೃಷ್ಣರ ಜೀವನದಿಂದ ನಾವು ತಿಳಿಯುತ್ತೇವೆ. ಯಾಂತ್ರಿಕತೆಯಿಂದ ಕೂಡಿದ ಯಾವ ಕ್ರಿಯೆಯೂ ಫಲಕಾರಿಯಲ್ಲ. ಇಂತಹ ಯಾಂತ್ರಿಕ, ಭಾವಶೂನ್ಯ ಕ್ರಿಯಾಪದ್ಧತಿಗಳನ್ನು ಕಂಡು ನಾಸ್ತಿಕರು, ವಿಚಾರವಾದಿಗಳು ಈ ಆಚರಣೆಗಳನ್ನು ನಿಂದಿಸಿದರೆ ಅದನ್ನು ತಪ್ಪೆಂದು ಹೇಳಲಾಗದು. ಸಮಾಜ ಹಾಗೂ ಧರ್ಮದ ಸುಧಾರಕರು ವಿಗ್ರಹಾರಾಧನೆಯನ್ನು ನಿಂದಿಸುತ್ತಿದ್ದ ಕಾಲದಲ್ಲಿಯೇ ಅದನ್ನೇ ಸಾಧನವಾಗಿಸಿಕೊಂಡು ಸರ್ವತ್ರ ಮನ್ನಣೆ ಪಡೆದವರು ಶ್ರೀರಾಮಕೃಷ್ಣರು. ವಿಗ್ರಹವು ಕೇವಲ ಕಲ್ಲಿನ ಮೂರ್ತಿಯಾಗಿರದೆ ಚಿನ್ಮಯವಾಗಿತ್ತು, ಅವರ ದೃಷ್ಟಿಯಲ್ಲಿ. ಬ್ರಾಹ್ಮಣ ಮನೆತನದಲ್ಲಿ ಹುಟ್ಟಿದ್ದ ಶ್ರೀರಾಮಕೃಷ್ಣರಿಗೆ ಪೂಜೆಯ ವಿಧಾನಗಳೆಲ್ಲ ಗೊತ್ತಿದ್ದವು. ಆದರೆ ಸಾಂಪ್ರದಾಯಿಕ ಪೂಜಾರಿಗಳಂತೆ ಕೇವಲ ತಿರುಳಿಲ್ಲದ ಬಾಹ್ಯ ಆಚರಣೆಗಳಲ್ಲಿ ಅವರು ತೃಪ್ತರಾಗಲಿಲ್ಲ. ಪೂಜೆಯ ಮೂಲತತ್ತ್ವಕ್ಕೆ



ಮರುಜೀವ ನೀಡಿದರು. ಅದರ ಜಡಪರಿಧಿಯೊಳಗೆ ಸಿಲುಕಿ ಹಾಕಿಕೊಳ್ಳದೆ ಅದಕ್ಕೊಂದು ವಿಶೇಷ ಸ್ಥಾನವನ್ನೇ ಕಲ್ಪಿಸಿ ಕೊಟ್ಟರು.

ಶ್ರೀರಾಮಕೃಷ್ಣರನ್ನು ಅವಲಂಬಿಸಿಕೊಂಡು ತಮ್ಮ ಇಡೀ ಜೀವನವನ್ನೇ ರೂಪಿಸಿಕೊಂಡಿದ್ದ ಶ್ರೀಮಾತೆ ಶಾರದಾದೇವಿ ಗ್ರಾಮ್ಯ ಪರಿಸರದಲ್ಲಿ ಬೆಳೆದು ಬಂದು, ಅನಕ್ಷರಸ್ಥೆಯಾಗಿದ್ದರೂ ಪೂಜೆಯ ಮೂಲವನ್ನೇ ಗ್ರಹಿಸಿ, ಪಾಲಿಸಿದರು. ಶ್ರೀರಾಮಕೃಷ್ಣರನ್ನೇ ಪರದೈವವೆಂದು ಸಂಪೂರ್ಣವಾಗಿ ನಂಬಿದ್ದ ಅವರು, ಭಾವಚಿತ್ರದಲ್ಲಿಯೇ ಅವರ ಸಾನ್ನಿಧ್ಯವನ್ನು ಅನುಭವಿಸುತ್ತಿದ್ದರು. ಶ್ರೀರಾಮಕೃಷ್ಣರು ಪ್ರಾರಂಭಿಕ ಹಂತದಲ್ಲಿ ವಿಧಿವತ್ತಾಗಿ ಅರ್ಚನೆ, ಪೂಜೆಗಳನ್ನು ಮಾಡಿ ಅನಂತರ ಭಾವಪ್ರಧಾನವಾದ ಪೂಜೆಯಲ್ಲಿ ತಲ್ಲೀನರಾದರು. ಆದರೆ ಶ್ರೀಮಾತೆ ಯಾವುದೇ ಮಂತ್ರಗಳ ಪ್ರಯೋಗವಿಲ್ಲದೆ ಕೇವಲ ಭಾವನೆಯ ಶುದ್ಧಿಯಿಂದಲೇ ಪೂಜೆಯನ್ನು ಸಾಧಿಸುತ್ತಿದ್ದರು. ಬಾಹ್ಯಾಡಂಬರಗಳಿಂದ ದೇವರನ್ನು ಒಲಿಸಿಕೊಳ್ಳುವ ವಿಧಿಯನ್ನು ಅವರಲ್ಲಿ ಯಾರೂ ಕಂಡಿರಲಿಲ್ಲ.

ಶ್ರೀಮಾತೆಯು ವಿಶೇಷ ರೀತಿಯಲ್ಲಿ ಪೂಜೆಯನ್ನು ಮಾಡುತ್ತಿದ್ದರು. ಅವರಿಗೆ ಪತಿಯ ಆರಾಧನೆ ತೋರಿಕೆಯ ಲೋಕಾಚಾರವಾಗಿರಲಿಲ್ಲ. ಪ್ರೀತಿಯ ಸಲಿಗೆ, ಸಾಮೀಪ್ಯದ ಭಾವಗಳು ಅವರ ಪೂಜೆಯ ಪ್ರಧಾನ ಅಂಗಗಳಾಗಿದ್ದವು. ಜೀವಂತ ವ್ಯಕ್ತಿಯ ಸೇವೆಯನ್ನು ಮಾಡುತ್ತಿರುವಂತೆ ನೋಡುವವರಿಗೆ ಭಾಸವಾಗುತ್ತಿತ್ತು. ಮಂತ್ರ-ತಂತ್ರಗಳಿಲ್ಲ, ಮಡಿ-ಮೈಲಿಗೆಗಳ ಹಾವಳಿಯಿಲ್ಲ. ಪೂಜೆಗೆ ಬೇಕಾಗುವ ಹೂವು, ಗಂಧ, ಚಂದನ ಹಾಗೂ ಹಣ್ಣುಗಳನ್ನು ತಾವೇ ಅಣಿ

ಮಾಡಿಟ್ಟುಕೊಳ್ಳುತ್ತಿದ್ದರು. ಕೆಲವೊಮ್ಮೆ ಅದನ್ನು ಇತರರು ಮಾಡಿಕೊಡುತ್ತಿದ್ದರು. ಹಾಗೆ ಮಾಡಿಕೊಡುತ್ತಿದ್ದವರೂ ಯಾವ ಜಾತಿ, ಕುಲದವರೆಂಬ ಪ್ರಶ್ನೆ ಎಂದೂ ಬರಲೇ ಇಲ್ಲ! ಭಕ್ತಿ ಶ್ರದ್ಧೆಗಳಿಗೇ ಒತ್ತು ಕೊಡುತ್ತ, ಎಲ್ಲವೂ ಅಂದವಾಗಿ, ಅಚ್ಚು ಕಟ್ಟಾಗಿ ಜೀವಂತ ವ್ಯಕ್ತಿಗೆ ಹೇಗೋ ಹಾಗೆ ಆಪ್ಯಾಯಮಾನ ವಾಗುವಂತಿರಬೇಕು ಎಂದು ಹೇಳುತ್ತಿದ್ದರು. ಹೂವುಗಳನ್ನು ಬೊಗಸೆಯಲ್ಲಿ ಹಿಡಿದು ಪತಿಯ ಭಾವಚಿತ್ರದ ಮುಂದೆ ಅವು ಗಳನ್ನು ಪ್ರೀತಿಯಿಂದ ಇರಿಸಿ, ಧ್ಯಾನದಲ್ಲಿ ತಲ್ಲೀನರಾಗುತ್ತಿದ್ದರು. ಎಲ್ಲವೂ ಸೇರಿ ಪೂಜೆ ಅರ್ಧ ಗಂಟೆಯೊಳಗೆ ಮುಗಿದು ಹೋಗುತ್ತಿತ್ತು.

ಶ್ರೀರಾಮಕೃಷ್ಣರಿಗೆ ನೈವೇದ್ಯ ಅರ್ಪಿಸುತ್ತಿದ್ದ ವಿಧಾನವೂ ಸರಳತೆ ಹಾಗೂ ಆತ್ಮೀಯತೆಯಿಂದ ಕೂಡಿತ್ತು. ಮಾಡಿರುವ ಅಡುಗೆಯನ್ನೆಲ್ಲ ತಟ್ಟೆಯಲ್ಲಿ ಜೋಡಿಸಿಟ್ಟು ಅವರನ್ನು ಕೂಗಿ ಕರೆಯುತ್ತಿದ್ದರು, "ದಯವಿಟ್ಟು ಬನ್ನಿ, ಊಟವನ್ನು ಸ್ವೀಕರಿಸಿ" ಎಂದು. ಜಗದ್ಧಾತ್ರಿ ಪೂಜೆಯ ವೇಳೆಯಲ್ಲಿ ತಮ್ಮ ಹಳ್ಳಿಯಾದ ಜಯರಾಂಬಾಟಿಯಲ್ಲಿ ಇದ್ದಾಗಲಂತೂ "ಹೇ ದೇವ! ಇವತ್ತು ತಾವು ಸ್ವಲ್ಪ ಬೇಗ ಸ್ವೀಕರಿಸಿ. ನಾನು ಜಗದ್ಧಾತ್ರಿಯ ಪೂಜೆಗೆ ಹೋಗಬೇಕಾಗಿದೆ" ಎಂದು ಹೇಳುತ್ತಿದ್ದರು. ಜಗದ್ಧಾತ್ರಿ, ದುರ್ಗಾದೇವಿಯರ ಸಾಂಪ್ರದಾಯಿಕ ಪೂಜೆಯನ್ನು ಮಾಡುವ ಪೂಜಾರಿಗಳ ಬಗ್ಗೆ ಅತೀವವಾದ ಶ್ರದ್ಧೆಯನ್ನು ವ್ಯಕ್ತಪಡಿಸು ತ್ತಿದ್ದರು. ಆದರೆ ತಾವು ಮಾತ್ರ ಅವರಂತೆ ಮಂತ್ರಗಳನ್ನು ಪಠಿಸದೆ, ದೇವಿಯನ್ನುದ್ದೇಶಿಸಿ ಮಾತನಾಡುವ ಒಂದು ಆತ್ಮೀಯತೆಯನ್ನು ಉಳಿಸಿಕೊಂಡು ತಮ್ಮ ಪೂಜೆಯನ್ನು ಮುಗಿಸುತ್ತಿದ್ದರು. "ಓ ತಾಯಿ! ಕೋಪಿಸಿಕೊಳ್ಳಬೇಡ, ಏನಾದರೂ ನ್ಯೂನತೆಗಳಿದ್ದಲ್ಲಿ ಕ್ಷಮಿಸು. ಮತ್ತೆ ಮುಂದಿನ ವರ್ಷ ತಪ್ಪದೇ ಬರಬೇಕು", ಎಂದು ಕೈಜೋಡಿಸಿ ಅವರು ಪ್ರಾರ್ಥಿಸುತ್ತಿದ್ದಾಗ ಪಕ್ಕದಲ್ಲಿದ್ದವರಿಗೆಲ್ಲ ದೇವಿಯು ಇವರ ನುಡಿಗಳನ್ನು ಆಲಿಸುತ್ತಿರುವಳು ಎಂದು ಭಾಸವಾಗುತ್ತಿತ್ತು. ತಾಯಿಯೊಂದಿಗಿನ ನಿಕಟತೆ, ಬಾಂಧವ್ಯ ಅವರ ಈ ನಡೆಯಲ್ಲಿ ಎದ್ದು ಕಾಣುತ್ತದೆ. ಪೂಜಿಸಲ್ಪಡುತ್ತಿರುವ ತಾಯಿಯೂ ಮನೆಮಂದಿಯಲ್ಲಿ ಒಬ್ಬರು ಎಂಬ ಸಲಿಗೆ, ಆತ್ಮೀಯತೆ ಇಲ್ಲಿದೆ. ಒಮ್ಮೆ ಎತ್ತಿನ ಗಾಡಿಯಲ್ಲಿ ಬಹಳ ದೂರದ ಕಲ್ಕತ್ತೆಯಿಂದ ಜಯರಾಂಬಾಟಿಗೆ ಪ್ರಯಾಣಿಸುತ್ತಿದ್ದಾಗ, ರಸ್ತೆಯ ಬದಿಯಲ್ಲಿ ಮಡಿಕೆಯೊಂದರಲ್ಲಿ ಅನ್ನ ಮಾಡ ಲಾಗಿತ್ತು. ಒಲೆಯಿಂದ ಇಳಿಸುವಾಗ ಕೈಜಾರಿ ಮಡಕೆ ಒಡೆದು ಅನ್ನವೆಲ್ಲ ಕೆಳಗೆ ಚೆಲ್ಲಿತು. ಶ್ರೀಮಾತೆ ಅತ್ಯಂತ ಸಹಜವಾಗಿ ಮೇಲಿದ್ದ ಅನ್ನವನ್ನು ಆಯ್ದು ಶ್ರೀರಾಮಕೃಷ್ಣರ ಮುಂದಿಟ್ಟು "ಇವತ್ತು ಇದರಿಂದಲೇ ನೀವು ತೃಪ್ತರಾಗಬೇಕು", ಎಂದು ನೈವೇದ್ಯವನ್ನು ಅರ್ಪಿಸಿದರು.

ಇಂತಹ ಆಂತರಿಕ ಭಕ್ತಿಯನ್ನು ಕಂಡು ಆಶ್ಚರ್ಯ ವಾಗುವುದು. ಪೂಜೆ ಎಂದಕೂಡಲೇ ನಾನಾ ರೀತಿಯ ವಿಧಿ ನಿಯಮಗಳಿರಬೇಕು ಎಂದೇ ಎಲ್ಲರೂ ಭಾವಿಸುತ್ತಾರೆ. ವೈದಿಕ ಯುಗದಲ್ಲಿ ಪೂಜೆಯ ಪದ್ಧತಿಯೇ ಇರಲಿಲ್ಲ ಎಂಬುದು ಅನೇಕರಿಗೆ ತಿಳಿದಿಲ್ಲ. ವಿಗ್ರಹಾರಾಧನೆ, ದೇವಸ್ಥಾನ, ಪೂಜೆಯ ವಿಧಾನಗಳೆಲ್ಲ ಬೌದ್ಧ ಧರ್ಮದಿಂದ ಎರವಲು ಪಡೆದುಕೊಂಡಿರುವ ಆಚರಣೆಗಳು. ವೈದಿಕ ತತ್ತ್ವಗಳನ್ನೆಲ್ಲ ಜನಸಾಮಾನ್ಯರಿಗೆ ನಿಲುಕುವಂತೆ ಮಾಡಿದ ತಂತ್ರಶಾಸ್ತ್ರದ ಬೆಳವಣಿಗೆಯು ಪೂಜೆಯ ಆಚರಣೆಗೆ ಪುಷ್ಟಿಯನ್ನು ನೀಡಿತು.

## ಪೂಜೆ ಪದದ ಅರ್ಥ

ಪೂಜೆಯನ್ನು ಮಾಡುವ ಆರಾಧಕನು ಆರಾಧ್ಯ ದೇವತೆ ಯೊಂದಿಗೆ ಐಕ್ಯವನ್ನು ಹೊಂದುವುದೇ ಪೂಜೆ ಎನಿಸಿ ಕೊಳ್ಳುತ್ತದೆ ಎಂದು ಮಹಾ ನಿರ್ವಾಣ ತಂತ್ರ (೧೪.೧೨೩) ಹೇಳುತ್ತದೆ—**ಯೋಗೋ ಜೀವಾತ್ಮನೋರೈಕ್ಯಂ ಪೂಜನಂ ಸೇವಕೇಶಯೋಃ**. ಪೂಜೆಯು ಮೂಲತಃ ಒಂದು ಆಧ್ಯಾತ್ಮಿಕ ಕ್ರಿಯೆ. ವೈದಿಕ ಕಾಲದಲ್ಲಿದ್ದ ಹೋಮ, ಯಾಗ, ಯಜ್ಞಾದಿಗಳು ಕ್ರಮೇಣವಾಗಿ ತಮ್ಮ ಪ್ರಾಶಸ್ತ್ಯವನ್ನು ಕಳೆದುಕೊಳ್ಳುತ್ತ ಬಂದಂತೆ ಬಾಹ್ಯ ಆಚರಣೆಗಳನ್ನು ಆಂತರಿಕ ಕ್ರಿಯೆಗಳಾಗಿ ಪರಿವರ್ತಿಸಿ 'ಉಪಾಸನೆ'ಯಾಗಿ ಭಾವಿಸುವುದು ಪ್ರಾರಂಭವಾಯಿತು. ಛಾಂದೋಗ್ಯ ಉಪನಿಷತ್ತಿನಲ್ಲಿ ಬರುವ ಹಲವಾರು ಉಪಾಸನೆಗಳು ಭಕ್ತಿಯ ಕಲ್ಪನೆಯನ್ನು ಒಳಗೊಂಡಿದ್ದು ಜ್ಞಾನಮಾರ್ಗದ ಮೂಲಕ ಅಥವಾ ಕೇವಲ ಯಜ್ಞಾದಿ ಕರ್ಮದ ಮೂಲಕ ಸಾಧಿಸಬಹುದಾದಂತಹ ಮುಕ್ತಿಯನ್ನು ಧ್ಯೇಯವಸ್ತುವಿನ ಧ್ಯಾನದಿಂದ ಸಾಧಿಸಬಹುದು ಎಂದು ತಿಳಿಸುತ್ತವೆ. ಬೃಹದಾರಣ್ಯಕ ಉಪನಿಷತ್ತಿನ (೧.೩.೯) ಭಾಷ್ಯ ದಲ್ಲಿ ಶ್ರೀ ಶಂಕರಾಚಾರ್ಯರು ಉಪಾಸನೆಯನ್ನು ಕುರಿತು "ಉಪಾಸನೆ ಎಂದರೆ ವೇದಗಳಲ್ಲಿರುವ ಸ್ತೋತ್ರವಾಕ್ಯಗಳಲ್ಲಿ ತಿಳಿಸಿರುವಂತೆ ಮನಸ್ಸಿನ ಮೂಲಕ ಅದರ ಬಳಿಗೆ ಬಂದು **(ಉಪ)** ಕುಳಿತಿರುವುದು **(ಆಸನಮ್)**, ಎಂದರೆ ಲೋಕದ (ಪ್ರಾಪಂಚಿಕ ವಸ್ತುಗಳ) ಪ್ರತ್ಯಯವು (ಚಿಂತೆಗಳು) ನಡುವೆ ಬಾರದಂತೆ ಆ ದೇವತೆಯೇ ಮುಂತಾದ ಧ್ಯೇಯವಸ್ತುವಿನ ಸ್ವರೂಪವೇ ತಾನೆಂಬ ಅಭಿಮಾನವು, ಲೌಕಿಕವಾದ (ದೇಹಾದಿಗಳು) ತಾನೆಂಬ ಅಭಿಮಾನದಂತೆ (ಗಟ್ಟಿಯಾಗಿ) ಹೊರತೋರುವವರೆಗೂ ಚಿಂತಿಸುತ್ತಿರುವುದು. **ದೇವೋ ಭೂತ್ವಾ ದೇವಾನಪ್ಯೇತಿ**—ದೇವನಾಗಿ ದೇವರುಗಳಲ್ಲಿ ಲಯವಾಗುತ್ತಾನೆ ಮತ್ತು **ಕಿಂ ದೇವತೋಽಸ್ಯಾಂ ಪ್ರಾಚ್ಯಾಂ ದಿಶ್ಯಸಿ**—ಈ ಪೂರ್ವದಿಕ್ಕಿನಲ್ಲಿ ಯಾವ ದೇವತೆಯೊಂದಿಗೆ (ತಾದಾತ್ಮ್ಯ) ಉಳ್ಳವನಾಗಿರುವೆ? ಎಂಬ ಶ್ರುತಿವಾಕ್ಯಗಳಿಂದ ಇದು ತಿಳಿದು ಬರುತ್ತದೆ" ಎಂದು ಹೇಳುತ್ತಾರೆ.

ಶ್ರೀಶಂಕರರ ಅಭಿಪ್ರಾಯದಂತೆ ಧ್ಯೇಯವಸ್ತುವು ನಿರ್ಗುಣ ನಿರಾಕಾರವಾದ ಬ್ರಹ್ಮವಾಗಿರಬಹುದು, ದೇವತೆಯಾಗಿರಬಹುದು ಅಥವಾ ವಸ್ತುವಾಗಿರಬಹುದು. ಧ್ಯಾನವು ಪ್ರಧಾನವಾಗಿ ಮಾನಸಿಕ ಕ್ರಿಯೆಯಾದ್ದರಿಂದ ಧ್ಯಾನಮಾಡುತ್ತಿರುವ ವ್ಯಕ್ತಿಯು ಧ್ಯೇಯ ವಸ್ತುವಿನೊಂದಿಗೆ ಆಂತರಿಕವಾಗಿ ಒಂದಾಗಲು ಪ್ರಯತ್ನಿಸುವುದೇ ಇದರ ಮೂಲ ಉದ್ದೇಶ. ಊಹೆ ಅಥವಾ ಕಾಲ್ಪನಿಕ ವಿಷಯಗಳನ್ನು ಕುರಿತು ಧ್ಯಾನವನ್ನು ಇಲ್ಲಿ ಹೇಳಲಾಗುತ್ತಿಲ್ಲ. ಪ್ರಾಪಂಚಿಕ ವಿಷಯವಸ್ತುಗಳೊಂದಿಗೆ ಯಾವ ರೀತಿಯ ತಾದಾತ್ಮ್ಯವಿರುವುದೋ—"ನಾನೇ ಈ ದೇಹ", "ಈ ವಸ್ತು ನನ್ನದು"— ಅದೇ ತೀವ್ರತೆಯುಳ್ಳ ತಾದಾತ್ಮ್ಯವನ್ನು ಧ್ಯೇಯದೊಂದಿಗೆ ಸಾಧಿಸಬೇಕೆಂದು ಶಂಕರರು ಮೇಲೆ ಹೇಳಿದ್ದಾರೆ. ಶ್ರೀರಾಮಕೃಷ್ಣರು ದೇವರೊಂದಿಗೆ ತಾಯಿಯಂತೆ, ಮಗುವಿನಂತೆ, ಸಖನಂತೆ, ದಾಸನಂತೆ ಸಂಬಂಧವನ್ನು ಬೆಳೆಸಿಕೊಳ್ಳಬೇಕು ಎಂದು ಮತ್ತೆ ಮತ್ತೆ ಹೇಳುತ್ತಿದ್ದರು. ಇದು ಭಾವಶುದ್ಧಿ ಹಾಗೂ ಚಿತ್ತಶುದ್ಧಿಗೆ ಕಾರಣವಾಗುತ್ತದೆ. ಅಧ್ಯಾತ್ಮದ ತಳಹದಿಯಲ್ಲಿ ಈ ಭಾವನೆಗಳನ್ನು ಬೆಳೆಸಿಕೊಂಡಾಗ ಅವು ಪ್ರಾಪಂಚಿಕ ರೂಪವನ್ನು ತಾಳದೆ ದಿವ್ಯಸಂಬಂಧಗಳಿಗೆ ನಾಂದಿಯಾಗುವುವು. ಶ್ರೀಮಾತೆಯು ತಮ್ಮ ಜೀವನದುದ್ದಕ್ಕೂ ಈ ಉಪದೇಶವನ್ನು ಪಾಲಿಸಿದ್ದರು. ಪತಿಯನ್ನೇ ದೇವರೆಂದು ಕಾಣುತ್ತ, ಭಕ್ತರನ್ನೆಲ್ಲ ತನ್ನ ಮಕ್ಕಳೆಂದು ಕಾಣುತ್ತ ಎಲ್ಲ ವೈಯಕ್ತಿಕ ಸಂಬಂಧಗಳನ್ನೂ ಆಧ್ಯಾತ್ಮೀಕರಿಸಿದರು. ಈ ಸಾಧನೆಯ ಫಲವಾಗಿ ಎಲ್ಲ ಕ್ರಿಯೆಗಳೂ, ಸಂಬಂಧಗಳೂ ಆಧ್ಯಾತ್ಮಿಕವಾಗಿ ಪರಿವರ್ತನೆಗೊಂಡು ಅವಿಚ್ಛಿನ್ನ ಸ್ರೋತದಂತೆ ಆತಂಕ, ಭಯ, ತಾಪಗಳ ಅಡಚಣೆಗಳಿಲ್ಲದೆ ಶಾಂತವಾಗಿ ನಡೆಯುತ್ತಿದ್ದವು. ಇಂತಹ ನಡತೆ ಚಿತ್ತಶುದ್ಧಿ ಇರುವವರಲ್ಲಿ ಮಾತ್ರ ಸಾಧ್ಯ. ಎಲ್ಲ ಸಾಧನೆಗಳೂ ಚಿತ್ತಶುದ್ಧಿಯನ್ನು ಸಾಧಿಸಲು ಮಾರ್ಗಗಳು. ಅಂತೆಯೇ ಚಿತ್ತಶುದ್ಧಿಯೇ ಪೂಜೆಯ ಮೂಲ ಉದ್ದೇಶ. ತನ್ಮೂಲಕ ದೇವತೆಯೊಂದಿಗೆ ಒಂದಾಗುವುದೇ ಪೂಜೆಯ ಗುರಿ. ಎಲ್ಲ ಕ್ರಿಯೆಗಳೂ ಜ್ಞಾನದತ್ತ ನಮ್ಮನ್ನು ಕೊಂಡೊಯ್ಯಬೇಕು. ಅಜ್ಞಾನ ನಾಶವಾಗುವವರೆಗೂ ಸುಖದುಃಖಾದಿ ದ್ವಂದ್ವಗಳನ್ನು ಅನುಭವಿಸಬೇಕಾಗುತ್ತದೆ. ಆದ್ದರಿಂದ ನಮ್ಮ ಬಗ್ಗೆ ತಿಳಿವು, ಆರಾಧ್ಯವಸ್ತುವಿನ ಬಗ್ಗೆ ಅರಿವು ಹಾಗೂ ಕ್ರಿಯೆಯ ಅಜ್ಞಾನವನ್ನು ನಾಶಮಾಡುವ ಶಕ್ತಿಯ ಅರಿವು—ಈ ಮೂರೂ ಆವಶ್ಯಕ. ಇದೇ ಆತ್ಮೋಪಲಬ್ಧಿ ಅಥವಾ ಸಗುಣಬ್ರಹ್ಮೋಪಲಬ್ಧಿ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಹೇಳುತ್ತಾನೆ, "ಎಲೈ ಅರ್ಜುನ! ದ್ರವ್ಯಮಯವಾದ ಯಜ್ಞಕ್ಕಿಂತಲೂ ಜ್ಞಾನಯಜ್ಞವು ಶ್ರೇಯಸ್ಕರವಾದುದು. ಎಲ್ಲ ಕರ್ಮವೂ ಜ್ಞಾನದಲ್ಲಿ ನಿಶ್ಶೇಷವಾಗಿ ಪರಿಸಮಾಪ್ತಿಯನ್ನು ಹೊಂದುತ್ತದೆ." (೪.೩೩)

ತಂತ್ರಶಾಸ್ತ್ರಗಳು ವೈದಿಕ ಮಂತ್ರಗಳ ತಾತ್ಪರ್ಯವನ್ನು ಬಳಸಿಕೊಂಡು, ಯಜ್ಞದಂತಹ ಕ್ರಿಯೆಗಳನ್ನು ಪೂಜೆಯ ರೂಪಕ್ಕೆ ಪರಿವರ್ತಿಸಿದವು. ಕೇವಲ ಋತ್ವಿಕರಿಗೇ ಮೀಸಲಾಗಿದ್ದ ವಿಧಿಗಳನ್ನು ಇತರ ವರ್ಗದವರೂ ಪೂಜೆಯ ಮೂಲಕ ಸಾಧಿಸಲು ಇದು ದಾರಿ ಮಾಡಿಕೊಟ್ಟಿತು. ಉದಾತ್ತ ವೇದಾಂತದ ವಿಚಾರಗಳನ್ನು ಜನಪ್ರಿಯಗೊಳಿಸಿದ ಕೀರ್ತಿ ತಂತ್ರಗಳಿಗೆ ಸಲ್ಲುತ್ತದೆ ಎಂದರೆ ತಪ್ಪಾಗಲಾರದು. ಇಂದು ಆಚರಣೆಯಲ್ಲಿರುವ ಎಲ್ಲ ಪೂಜಾಪದ್ಧತಿಗಳೂ ವಿವಿಧ ತಂತ್ರಶಾಸ್ತ್ರಗಳನ್ನೇ ಆಧಾರವಾಗಿ ಇಟ್ಟುಕೊಂಡಿವೆ. ತಂತ್ರಶಾಸ್ತ್ರಗಳಲ್ಲಿ ಹಲವು ವಿಧ. ಆಯಾ ದೇಶ ಅಥವಾ ದೇವರ ಪ್ರಾಶಸ್ತ್ಯದಂತೆ ತಂತ್ರಗಳೂ ಬೆಳೆದಿವೆ. ದೇವಿ, ಶಿವ, ವಿಷ್ಣು, ಕಾರ್ತಿಕೇಯ, ಸೂರ್ಯ ಮುಂತಾದ ದೇವತೆಗಳಿಗೇ ಮೀಸಲಿರುವ ತಂತ್ರಗಳಿವೆ. ಆಯಾ ದೇವರ ಪ್ರತ್ಯೇಕ ಪೂಜಾವಿಧಾನಗಳನ್ನು ಇವು ತಿಳಿಸುತ್ತವೆ. ಪರಶಿವನು ಪಾರ್ವತಿಗೆ ಬೋಧಿಸಿದ ಯಾಮಳ, ಡಾಮರ, ಶಿವಸೂತ್ರ ಮತ್ತು ತಂತ್ರಗಳೆಂಬ ಹೆಸರುಳ್ಳ ಇತರ ಗ್ರಂಥಗಳನ್ನೂ ಇದು ಒಳಗೊಂಡಿದೆ. ಪ್ರಸಿದ್ಧವಾದ ಒಂದು ಅಭಿಪ್ರಾಯದಂತೆ, "ಕೃತಯುಗದಲ್ಲಿ ವೇದಗಳು, ತ್ರೇತಾಯುಗದಲ್ಲಿ ಸ್ಮೃತಿಗಳು, ದ್ವಾಪರಯುಗದಲ್ಲಿ ಪುರಾಣಗಳು ಹಾಗೂ ಕಲಿಯುಗದಲ್ಲಿ ತಂತ್ರಗಳು, ಶಾಸ್ತ್ರಗಳು ಈ ನಿಟ್ಟಿನಲ್ಲಿ ಪ್ರಮುಖವಾದ ಆಧಾರಗಳಾಗಿವೆ." ಮುಖ್ಯವಾಗಿ ವಿಷ್ಣುಕ್ರಾಂತ, ರಥಕ್ರಾಂತ ಹಾಗೂ ಅಶ್ವಕ್ರಾಂತವೆಂದು ತಂತ್ರಗಳನ್ನು ಗುರುತಿಸಲಾಗಿದೆ. ಅವುಗಳ ವಿವರಣೆ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿಲ್ಲ.

ಪೂಜೆಯಲ್ಲಿ ಬಾಹ್ಯ ಮತ್ತು ಮಾನಸಿಕ ಎಂಬ ಎರಡು ವಿಧಗಳಿವೆ. ಪುಷ್ಪ, ಗಂಧ, ಧೂಪ, ದೀಪ, ನೈವೇದ್ಯಾದಿಗಳ ಸಹಾಯದಿಂದ ಮಾಡುವ ಪೂಜೆ ಬಾಹ್ಯ ಪೂಜೆಯಾಗುತ್ತದೆ. ಮಾನಸಿಕ ಧ್ಯಾನದಲ್ಲಿ ಭಗವಂತನ ಸಾನ್ನಿಧ್ಯವನ್ನು ಅನುಭವಿಸುತ್ತ ಅವನಿಗೆ ಅರ್ಪಿಸುವ ಭಾವನೆಗಳ ಪೂಜೆಯು ಎರಡನೆಯದು. ಬಾಹ್ಯ ಪೂಜೆಯಲ್ಲಿ ವೈದಿಕ ಹಾಗೂ ತಾಂತ್ರಿಕವೆಂಬ ಪ್ರಭೇದಗಳಿವೆ. ವೈದಿಕ ಮಂತ್ರ, ವಿಧಿಗಳಿಗನುಸಾರ ಮಾಡುವ ಪೂಜೆ ಮೊದಲನೆಯದು. ತಂತ್ರಶಾಸ್ತ್ರಗಳನ್ನು ಬಳಸಿಕೊಂಡು ಮಾಡುವ ಪೂಜೆ ಎರಡನೆಯದು. ಈ ಎರಡು ಪ್ರಮುಖ ಪ್ರಭೇದಗಳಲ್ಲದೆ ಸಾಧಾರ (ವಿಗ್ರಹ, ಮೂರ್ತಿಗಳ ಪ್ರಯೋಜನವನ್ನು ಪಡೆದು ಮಾಡುವ ಪೂಜೆ) ನಿರಾಧಾರ (ನಿರ್ಗುಣ ಬ್ರಹ್ಮನ ಉಪಾಸನೆ, ಪೂಜೆ), ನಿತ್ಯ (ಪ್ರತಿದಿನವೂ ಮಾಡುವ ಪೂಜೆ), ನೈಮಿತ್ತಿಕ (ವಿಶೇಷ ದಿನಗಳಂದು ಮಾಡುವ ಪೂಜೆ ಮತ್ತು ವ್ರತಗಳು), ಕಾಮ್ಯ (ಬಯಸಿದ್ದನ್ನು ಪಡೆಯಲು ಮಾಡುವ ವಿಶೇಷ ಪೂಜೆಗಳು), ಸಾತ್ತ್ವಿಕ (ತೋರಿಕೆಯಿಲ್ಲದೆ ಭಕ್ತಿಯಿಂದ ಮಾಡಲ್ಪಡುವ ಪೂಜೆ), ರಾಜಸಿಕ (ಆಡಂಬರ

ಹಾಗೂ ವಿಜೃಂಭಣೆಯ ಪೂಜೆ) ಹಾಗೂ ಸ್ವಾಭಾವಿಕ ಪೂಜೆ ಎಂಬ ವಿಧಗಳಿವೆ. ಪೂಜೆ ಮಾಡುವವರ ಉದ್ದೇಶ ಹಾಗೂ ಮನೋಭಾವವು ಪೂಜೆಯಲ್ಲೂ ವ್ಯಕ್ತವಾಗುವುದರಿಂದ ಇಷ್ಟೊಂದು ರೀತಿಯ ಪೂಜೆಗಳನ್ನು ಗುರುತಿಸಬಹುದಾಗಿದೆ.

ಬಾಹ್ಯ ಪೂಜೆಯನ್ನು ತಂತ್ರಶಾಸ್ತ್ರಗಳು ಪೂಜೆಯ ಪ್ರಥಮ ಹಂತವೆಂದೇ ಹೇಳುತ್ತವೆ. ಆಡಂಬರಸಹಿತವಾದ ಪೂಜೆಯನ್ನು ಅಧಮಾಧಮ ಎಂದು ಕರೆಯುವ ಮಹಾನಿರ್ವಾಣ ತಂತ್ರವು ಪೂಜೆಯ ಉದ್ದೇಶವನ್ನು ಹೀಗೆ ಸ್ಪಷ್ಟಪಡಿಸುತ್ತದೆ:

ಉತ್ತಮೋ ಬ್ರಹ್ಮಸದ್ಭಾವೋ ಧ್ಯಾನಭಾವಸ್ತು ಮಧ್ಯಮಃ ।
ಸ್ತುತಿರ್ಜಪೋಽಧಮೋ ಭಾವೋ ಬಹಿಃ ಪೂಜಾಧಮಾಽಧಮಾ॥

(೧೪.೧೨೨)

ಬ್ರಹ್ಮಭಾವದಲ್ಲಿ ಲೀನವಾಗುವುದೇ ಅತ್ಯುತ್ತಮ ಆಧ್ಯಾತ್ಮಿಕ ಸಾಧನೆ. ಧ್ಯಾನ ಅದಕ್ಕಿಂತ ಕೆಳಮಟ್ಟದ್ದು. ಸ್ತೋತ್ರಗಳನ್ನು ಪಠಿಸುವುದು, ಜಪ ಮಾಡುವುದು ಇವು ಇನ್ನೂ ಕೆಳಗಿನ ಸ್ತರ. ಎಲ್ಲಕ್ಕಿಂತಲೂ ಕೆಳಗಿನ ಸ್ತರವೆಂದರೆ ವಿಗ್ರಹಗಳ ಪೂಜೆಯನ್ನು ಮಾಡುವುದು. ಈ ಮಾತಿನಲ್ಲಿ ವಿಗ್ರಹಾರಾಧನೆಯ ಖಂಡನೆ ಇಲ್ಲ. ಆದರೆ ಅಲ್ಲಿಯೇ ನಿಲ್ಲದೆ ಮುಂದೆ ಸಾಗುತ್ತ ಬ್ರಹ್ಮಭಾವವನ್ನು ಹೊಂದುವ ಮಾನಸಿಕ, ಆಧ್ಯಾತ್ಮಿಕ ವಿಕಾಸ ಆಗಬೇಕಾದುದು ಅಗತ್ಯ ಎಂದು ತಿಳಿಸಲಾಗಿದೆ. ಗುರಿಯನ್ನು ಮರೆತುಬಿಟ್ಟರೆ ಕ್ರಿಯೆಗಳೇ ಪ್ರಧಾನವಾಗಿಬಿಡುತ್ತವೆ. ವಿಜ್ಞಾನಿಯು ತನ್ನ ಅಧ್ಯಯನದಲ್ಲಿ ಪ್ರಯೋಗಗಳನ್ನು ಮಾಡಲು ಹಲವಾರು ನಮೂನೆಗಳನ್ನು ತಯಾರಿಸುತ್ತಾನೆ. ಆದರೆ ಅವುಗಳ ಮೂಲಕ ಅನ್ವೇಷಣೆಯನ್ನು ಮುಂದುವರೆಸುತ್ತಾನೆ. ಅವುಗಳನ್ನೇ ಸತ್ಯವೆಂದು ನಂಬಿಕೊಂಡು ಆರಾಧಿಸುವುದಿಲ್ಲ. ವಿಗ್ರಹಾದಿಗಳಿಗೂ, ಲಾಂಛನಗಳಿಗೂ ಇಂತಹುದೇ ಸ್ಥಾನವಿದೆ. ಶ್ರೀರಾಮಕೃಷ್ಣರು ಹೇಳುವಂತೆ ವಿಗ್ರಹಗಳು ಮೃಣ್ಮಯವಲ್ಲ, ಚಿನ್ಮಯ. ಆದರೆ, ಅದನ್ನು ಅರಿಯುವಂತಹ ಭಾವಶುದ್ಧಿಯನ್ನು ಭಕ್ತ ಸಾಧನೆಯ ಮೂಲಕ ಸಾಧಿಸುತ್ತಾನೆ. ಅದು ಭಗವಂತನ ವಿಶೇಷ ಕೃಪೆಯಿಂದಲೂ ಬರಬಹುದು. ತಾಯಿ ತನ್ನ ಮಗುವಿಗೆ ಮುಂದಿನ ಮೆಟ್ಟಲುಗಳನ್ನು ತೋರಿಸುವಂತೆ ಭಕ್ತನಿಗೆ ಭಗವಂತನೇ ಮುಂದಿನ ದಾರಿಯನ್ನು ತೋರಿಸಿ ಕೊಡುತ್ತಾನೆ. ಅಲ್ಲದೆ ಶ್ರೀರಾಮಕೃಷ್ಣರು ಹೇಳುವಂತೆ, "ಮಗುವು ತಾಯಿಯನ್ನು 'ತಾ' ಎಂದಷ್ಟೇ ಕರೆದರೂ ತಾಯಿಗೆ ಮಗು ತನ್ನನ್ನೇ ಕರೆಯುತ್ತಿದೆ ಎಂಬುದು ತಿಳಿಯುವುದು." ವಿಗ್ರಹಾರಾಧನೆ ತಪ್ಪೆಂಬ ಅಭಿಪ್ರಾಯವನ್ನು ಶಾಸ್ತ್ರಗಳು ಪ್ರತಿಪಾದಿಸುತ್ತಿಲ್ಲ. ವಿಗ್ರಹಗಳಲ್ಲಿ ಭಗವಂತನ ವಿಶೇಷ ಅಭಿವ್ಯಕ್ತಿಯಿದೆ ಎಂಬುದನ್ನು ಹೇಳುತ್ತಿರುವಂತೆಯೇ ಮೇಲಿನ ಹಂತಗಳ ಔನ್ನತ್ಯವನ್ನೂ ತೋರಿಸುತ್ತಿವೆ. ಭಾಗವತದ ಹನ್ನೊಂದನೆಯ ಸರ್ಗದಲ್ಲಿ ನಾಲ್ಕು ರೀತಿಯ ಭಕ್ತರನ್ನು ಹೆಸರಿಸಲಾಗಿದೆ: ಪ್ರಾಕೃತ, ಮಧ್ಯಮ, ಭಾಗವತೋತ್ತಮ ಹಾಗೂ ಅನನ್ಯ. ಕೇವಲ ವಿಗ್ರಹಗಳಲ್ಲಿ ಭಗವಂತನನ್ನು ಕಂಡು ಶ್ರದ್ಧೆಯಿಂದ ಅರ್ಚಿಸುವವನು ಪ್ರಾಕೃತ ಭಕ್ತ. ಎಲ್ಲೆಡೆಯೂ ಭೇದ ಭಾವವಿಲ್ಲದೆ ಭಗವಂತನನ್ನೇ ಕಾಣುವವನು ಅನನ್ಯ. ಇದೇ ಭಾವನೆಯನ್ನು ಸ್ವಾಮಿ ವಿವೇಕಾನಂದರು ವ್ಯಕ್ತಪಡಿಸುತ್ತಾರೆ: "ಸಿದ್ಧನಾದ ಭಕ್ತ ದೇವರನ್ನು ನೋಡಲು ದೇವಸ್ಥಾನ ಚರ್ಚು ಮುಂತಾದವುಗಳಿಗೆ ಹೋಗುವುದೇ ಇಲ್ಲ. ಅವನಿಲ್ಲದೆ ಇರುವ ಸ್ಥಳವೇ ಅವನಿಗೆ ಗೊತ್ತಿಲ್ಲ. ಅವನಿಗೆ ದೇವರು ದೇವಸ್ಥಾನದ ಒಳಗೂ ಕಾಣುವನು, ಹೊರಗೂ ಕಾಣುವನು. ಅವನಿಗೆ ಸಾಧುವಿನ ಸಾತ್ತ್ವಿಕತೆಯಲ್ಲಿಯೂ, ದುರಾತ್ಮನ ದುಷ್ಟತನದಲ್ಲಿಯೂ ದೇವರು ಕಾಣುವನು. ಏಕೆಂದರೆ ಅವನಾಗಲೇ ಇವನ ಹೃನ್ಮಂದಿರದಲ್ಲಿ ಎಂದೆಂದಿಗೂ ನಂದಿ ಹೋಗದ ಪ್ರೇಮದ ನಂದಾದೀವಿಗೆಯಂತೆ ಬೆಳಗುತ್ತಿರುವನು" (ಸ್ವಾಮಿ ವಿವೇಕಾನಂದರ ಬೋಧನೆಯ ಸಾರ, ಪು. ೧೬).

ಶ್ರೀಮಾತೆ ಶಾರದಾದೇವಿಯವರು ತಮ್ಮ ಜೀವನದಲ್ಲಿ ಪೂಜೆಯ ಈ ಅಂತಿಮ ಹಂತವನ್ನು ಆಚರಿಸಿ ತೋರಿಸಿದ್ದಾರೆ. **ರಾಮಕೃಷ್ಣಗತಪ್ರಾಣಾಂ ತನ್ನಾಮ ಶ್ರವಣಪ್ರಿಯಾಂ**—"ಯಾರ ಪ್ರಾಣವು ಶ್ರೀರಾಮಕೃಷ್ಣರಲ್ಲೇ ಒಂದಾಗಿದೆಯೋ, ಯಾರು ಸದಾ ಅವರ ದಿವ್ಯನಾಮವನ್ನು ಕೇಳುವುದರಲ್ಲೇ ಆನಂದಿಸುವರೋ" ಎಂದು ಸ್ವಾಮಿ ಅಭೇದಾನಂದರು ಅವರನ್ನು ವರ್ಣಿಸಿದ್ದಾರೆ. ಆರಾಧ್ಯ ದೇವತೆಯೊಂದಿಗೆ ತಾದಾತ್ಮ್ಯವನ್ನು ಭಕ್ತ ಬಯಸುತ್ತಾನೆ, ಸಾಧಿಸುತ್ತಾನೆ. ಆಗ ನಿಜವಾದ ಅರ್ಥದಲ್ಲಿ ಯೋಗ ಸಿದ್ಧಿಸಿ, ಪೂಜೆ ಪರಿಪೂರ್ಣತೆಯನ್ನು ಪಡೆದುಕೊಳ್ಳುತ್ತದೆ. ಇದು ನಿಜವಾದ ಭಕ್ತನು ತಲುಪುವ ಹಂತ. ಪೂಜೆಯ ಕಡೆಯಲ್ಲಿ **ಯದ್ಯತ್ ಕರ್ಮ ಕರೋಮಿ ತತ್ತದಖಿಲಂ ಶಂಭೋ ತವಾರಾಧನಮ್**—ಯಾವ ಯಾವ ಕ್ರಿಯೆಗಳನ್ನು ಮಾಡುವೆನೋ, ಶಂಭುವೇ, ಅವೆಲ್ಲ ನಿನ್ನ ಆರಾಧನೆಯೇ ಎಂಬ ಮಂತ್ರದೊಂದಿಗೆ ಸಮರ್ಪಿಸಿದಾಗ ಇಡೀ ಜೀವನವೇ ಪೂಜೆಯಾಗಿ ಪರಿವರ್ತನೆಗೊಳ್ಳುತ್ತದೆ. ಲೌಕಿಕ-ಆಧ್ಯಾತ್ಮಿಕ ಎಂಬ ಭೇದದೃಷ್ಟಿ ಮಾಯವಾಗಿ ಸಮತ್ವದ ದೃಷ್ಟಿ ಬರುತ್ತದೆ. ಇಡೀ ವಿಶ್ವವೇ ಭಗವಂತನ ಲೀಲೆ, ಎಲ್ಲವೂ ಅವನಿಂದ ವ್ಯಾಪ್ತವಾಗಿದೆ ಎಂಬ ದೃಷ್ಟಿಯಿಂದ ಗೊಂದಲಗಳೆಲ್ಲ ಮಾಯವಾಗಿ ಎಲ್ಲವನ್ನೂ ಎಲ್ಲರನ್ನೂ ಸ್ವೀಕರಿಸುವ ಮನೋಭಾವ ಬರುತ್ತದೆ. ಇದು ಪೂಜೆಯು ನಮ್ಮಲ್ಲಿ ತರಬೇಕಾದ ಬದಲಾವಣೆ. ಅದನ್ನು ಶ್ರೀಮಾತೆ ಸಾಧಿಸಿ ನಮಗೆ ದಾರಿದೀಪದಂತೆ ಗುರಿಯತ್ತ ಕರೆಯುತ್ತಿದ್ದಾರೆ. ಸಣ್ಣತನಗಳನ್ನೆಲ್ಲ ಮರೆತು, ತಾಯಿಯ ಕರೆಗೆ ಓಗೊಟ್ಟು, ನಾವು ಮಕ್ಕಳೆಲ್ಲ ಒಂದಾಗಿ ಮುನ್ನಡೆಯೋಣ. *